# ಎಲ್ಲವನ್ನೂ ಸರಿಯಾದ ಸಮಯಕ್ಕೆ ಮುಗಿಸಿ, ಇಲ್ಲದಿದ್ದರೆ...

'ಏಣಾ, ನಿಮಗೆ ಪಾಸ್‌ಪೋರ್ಟ್ ಆಫೀಸಿನಲ್ಲಿ ಯಾರಾದರೂ ಪರಿಚಯದವರಿದ್ದಾರಾ? ನಿನಾದ್‌ಗೆ ಅರ್ಜೆಂಟಾಗಿ ಪಾಸ್‌ಪೋರ್ಟ್ ಬೇಕಾಗಿದೆ, ಏಕೆಂದರೆ ಅವನನ್ನು ಎರಡು ತಿಂಗಳುಗಳ ಅಸೈನ್‌ಮೆಂಟ್‌ಗಾಗಿ ಲಂಡನ್‌ಗೆ ಕಳುಹಿಸಲಾಗುತ್ತಿದೆ', ಶ್ರೀಮತಿ ಪಾರುಲೇಕರ್ ಫೋನಿನಲ್ಲಿ ಮಾತನಾಡುತ್ತಿದ್ದರು. ನಮಗೆ ಇಂಥ 2ರಿಂದ 4 ಕಾಲ್‌ಗಳು ಪ್ರತಿ ತಿಂಗಳೂ ಬರುತ್ತಿರುತ್ತವೆ. ಮತ್ತು ನಾವು ಇದಕ್ಕೆ ಬೇರೆ ಏಜೆಂಟರಿದ್ದಾರೆ ಎಂದು ಹೇಳಿದರೂ ಜನರು ಪ್ರಾರ್ಥನೆ ಮಾಡುತ್ತಲೇ ಇರುತ್ತಾರೆ.

ಅನುಭವಿ ಟ್ರಾವೆಲ್ ಪ್ರೊಫೆಷನಲ್ ಆಗಿ ಇದಕ್ಕೆ ಸಂಬಂಧಿಸಿ ಹಲವಾರು ಸಂಶಯಗಳು ನನ್ನ ಮನಸ್ಸಿನಲ್ಲಿ ಎದ್ದಿವೆ. ಕೆಲವರು ಪಾಸ್‌ಪೋರ್ಟ್ ಕಳೆದುಕೊಂಡು ನರ್ವಸ್ ಆದರೆ ಇನ್ನು ಕೆಲವರು ವಾಯಿದೆ ದಿನಾಂಕವು ಮೀರಿರುವುದರಿಂದಾಗಿ ತಲೆ ಕೆಡಿಸಿಕೊಳ್ಳಬೇಕಾಗುತ್ತದೆ. ಕೆಲವೊಮ್ಮೆ ಕೆಲವರಿಗೆ ವಿದೇಶಕ್ಕೆ ಹೋಗುವ ಸುವರ್ಣಾವಕಾಶವೇನೋ ಬರುತ್ತದೆ. ಆದರೆ ಪಾಸ್‌ಪೋರ್ಟ್ ಇಲ್ಲದೇ ಇರುವುದರಿಂದಾಗಿ ಅವರ ಬಸ್ ಮಿಸ್ ಆಗುತ್ತದೆ. ಕೆಲವರ ಪಾಸ್‌ಪೋರ್ಟ್ ಮೇಲಿನ ಗುರುತುಗಳಿಂದಾಗಿ ಅವರ ವೀಸಾ ತಿರಸ್ಕೃತಗೊಳ್ಳುತ್ತದೆ. ಈ ಎಲ್ಲ ವಿಷಯಗಳೂ ಗಾಬರಿ ಹುಟ್ಟಿಸದೇ ಇರುವುದಿಲ್ಲ. ಹಿಂದೆ ನಮ್ಮ ಕುಟುಂಬದ ಸದಸ್ಯರೂ ಇಂಥದ್ದೇ ಸಂದರ್ಭಗಳನ್ನು ಎದುರಿಸಿದ್ದಾರೆ. ನಮ್ಮ ಆಫೀಸ್‌ನ ಗಾಸಿಪ್ ಪ್ರಕಾರ ನಾವು ಇದಕ್ಕೆ 'ಮಾಡಿದ್ದುಣ್ಣೋ ಮಹಾರಾಯ' ಎಂದು ಹೇಳುತ್ತೇವೆ.

ಪಾಸ್‌ಪೋರ್ಟ್ ಇಲ್ಲದೇ ಇರುವುದು ಅಥವಾ ಲ್ಯಾಪ್ಸ್ ಆಗಿರುವ ಪಾಸ್‌ಪೋರ್ಟ್ ಇರುವುದು ಅಥವಾ ವೀಸಾ ಲಗತ್ತಿಸಲು ಅಗತ್ಯವಾಗುವ ಖಾಲಿ ಪುಟಗಳು ಪಾಸ್‌ಪೋರ್ಟಿನಲ್ಲಿ ಇಲ್ಲದೇ ಇರುವುದು, ಇಸಿಎನ್‌ಆರ್ (ವಲಸೆ ತಪಾಸಣೆಯು ಅಗತ್ಯವಾಗುವುದಿಲ್ಲ) ಮರೆತಿರುವುದು ಇತ್ಯಾದಿ ಸಮಾಜದಲ್ಲಿನ ಮಹಾಮಾರಿಗಳಿದ್ದಂತೆ. ಇವೆಲ್ಲ ಯಾರಿಗಾದರೂ ಆಗುತ್ತವೆ ಮತ್ತು ಇದರಲ್ಲಿ ಅವಮಾನವಾಗಲಿ ದಿಗಿಲಾಗುವಂಥದ್ದಾಗಲೀ ಏನೂ ಇಲ್ಲ. ವಾಸ್ತವವಾಗಿ ಇದು ಸಹಜವಾಗಿ ಇರುವುದರ ಸಂಕೇತ.

ಖಂಡಿತ ಈ ವಿಷಯವು ಗೊತ್ತಿರುವವರಿಗೆ ಮಾತ್ರವೇ ಅರ್ಥವಾಗುತ್ತದೆ. ಕಳವಳ, ದಿಗಿಲು, ಅಚ್ಚರಿ, ಸಿಟ್ಟು, ಆಘಾತ ಇತ್ಯಾದಿ ಪದಗಳನ್ನು ಏಕೆ ಬಳಕೆ ಮಾಡಲಾಗುತ್ತದೆ ಎಂಬುದು. ಪಾಸ್‌ಪೋರ್ಟ್‌ಗಳಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಯಾರೂ ಇಷ್ಟಪಡುವುದಿಲ್ಲ. ಏಕೆಂದರೆ ಇದಕ್ಕೆ ಸಂಬಂಧಿಸಿರುವ ಪ್ರಕ್ರಿಯಾತ್ಮಕ ಬಾಧ್ಯತೆಗಳು ಕಿರಿಕಿರಿ ಉಂಟು ಮಾಡಬಲ್ಲವು. ಆದ್ದರಿಂದ ನಾವು ಪಾಸ್‌ಪೋರ್ಟ್ ಬಗ್ಗೆ ಸ್ವಲ್ಪಮಟ್ಟಿನ ಎಚ್ಚರಿಕೆ ಹೊಂದಿರಬೇಕಾಗುತ್ತದೆ.

ನನಗೆ ಪಾಸ್‌ಪೋರ್ಟ್ ಪಡೆದುಕೊಳ್ಳುವುದಕ್ಕೆ 18 ತಿಂಗಳುಗಳೇ ಬೇಕಾದವು. ಆದರೆ ಇದಕ್ಕೆ ಪಾಸ್‌ಪೋರ್ಟ್ ಕಚೇರಿಯನ್ನು ದೂರುವಂತಿಲ್ಲ. ಇದಕ್ಕೆ ಕಾರಣ ನನ್ನ ಆಲಸ್ಯ ಹಾಗೂ ನಿರ್ಲಕ್ಷ್ಯ. ನಾನು ಅರ್ಜಿ ನಮೂನೆಗಳನ್ನು ಪಡೆದುಕೊಳ್ಳುವುದಕ್ಕೆ 3–4 ತಿಂಗಳುಗಳನ್ನು ಕಳೆದೆ. ನಂತರ ನಾನು ದಾಖಲೆಗಳನ್ನು ಸಂಗ್ರಹಣೆ ಮಾಡುವುದಕ್ಕೆ 11 ತಿಂಗಳುಗಳನ್ನು ತೆಗೆದುಕೊಂಡೆ, ನಂತರ ಪುನಃ ಹೆಚ್ಚಿನ ಅಗತ್ಯಗಳಿಗಾಗಿ 2 ಹೆಚ್ಚಿನ ತಿಂಗಳುಗಳನ್ನು ವ್ಯರ್ಥ ಮಾಡಿದೆ. ನಂತರ ನಾನು ಅರ್ಜಿ ಸಲ್ಲಿಸಿ 2 ತಿಂಗಳುಗಳ ಬಳಿಕ ಪಾಸ್‌ಪೋರ್ಟ್ ಪಡೆದುಕೊಂಡೆ. 2 ತಿಂಗಳಲ್ಲಿ ಪಡೆದುಕೊಳ್ಳಬೇಕಾದ ಪಾಸ್‌ಪೋರ್ಟ್ ಒಟ್ಟು 18 ತಿಂಗಳುಗಳನ್ನು ತೆಗೆದುಕೊಂಡಿತು. 80–20ರ ಮ್ಯಾನೇಜ್‌ಮೆಂಟ್ ಥಿಯರಿಗೆ ಇದು ಒಂದು ಉದಾಹರಣೆ.

ಮೊದಲ ಪಾಸ್‌ಪೋರ್ಟ್ ಹಗಲುಗನಸಿನ ಸಾಧನವಾಗಿತ್ತು. ನಾನು ನನ್ನ ಪಾಸ್‌ಪೋರ್ಟ್ ಅನ್ನು ದಿಟ್ಟಿಸಿನೋಡುತ್ತಿದ್ದೆ ಮತ್ತು ವಿಶ್ವದಾದ್ಯಂತ ಪ್ರವಾಸ ಕೈಗೊಂಡಂತೆ ಕನಸು ಕಾಣುತ್ತಿದ್ದೆ. ವಿಮಾನ ನಿಲ್ದಾಣಗಳಲ್ಲಿ ಚೆಕ್–ಇನ್ ಆಗುವಾಗ ಬೇರೆಯವರು ದಪ್ಪನೆಯ ಪಾಸ್‌ಪೋರ್ಟ್ ಹೊಂದಿರುವುದು ನನ್ನ ಮನಸ್ಸನ್ನು ಸೆಳೆಯುತ್ತಿತ್ತು. ಮೇಲಿನ ಚಿತ್ರವು ಶೈಲೇಶ್ ದುಬೈ ವಿಮಾನ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬನನ್ನು ಕಂಡಾಗ ತೆಗೆದಿದ್ದು. ವಿಚಾರಿಸಿದಾಗ ತಿಳಿದುಬಂದಿರುವ ಅಂಶವೆಂದರೆ ಇದು ಪ್ರವಾಸಿಗರ ಪಾಸ್‌ಪೋರ್ಟ್‌ಗಳ ಕಟ್ಟೇನೂ ಅಲ್ಲ. ಸತತವಾಗಿ ಪ್ರಯಾಣ ಮಾಡುತ್ತಲೇ ಇರುವ ವ್ಯಕ್ತಿಯೊಬ್ಬರ ಪಾಸ್‌ಪೋರ್ಟ್ ಎಂಬುದು. ಎಲೆಕ್ಟ್ರಾನಿಕ್ ಪಾಸ್‌ಪೋರ್ಟ್ ಮತ್ತು ಇ–ವೀಸಾಗಳ ಇಂದಿನ ದಿನಗಳಲ್ಲಿ ಪಾಸ್‌ಪೋರ್ಟ್ ಎಂದಿಗೂ ಈ ಗಾತ್ರದಲ್ಲಿ ಇರುವುದಿಲ್ಲ ಮತ್ತು ದಪ್ಪನೆ ಪಾಸ್‌ಪೋರ್ಟ್ ಹೊಂದಿದ್ದು ದೇಶವಿದೇಶಗಳಲ್ಲಿ ಸುತ್ತಾಡುವ ನನ್ನ ಕನಸು ಕನಸಾಗಿಯೇ ಇರುತ್ತದೆ ಎಂಬುದು ನನಗೂ ಗೊತ್ತು.

ಆದ್ದರಿಂದ ಪಾಸ್‌ಪೋರ್ಟ್ ಇಲ್ಲದೇ ಇರುವವರು ತಕ್ಷಣವೇ ಇದಕ್ಕೆ ಅರ್ಜಿ ಸಲ್ಲಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಪಾಸ್‌ಪೋರ್ಟ್ ಇಲ್ಲದೇ ಇರುವುದರಿಂದಾಗಿಯೇ ನೀವು ವಿದೇಶಕ್ಕೆ ಪ್ರವಾಸ ಕೈಗೊಳ್ಳುವ ಅವಕಾಶವನ್ನು ಕಳೆದುಕೊಳ್ಳುವಂತಾಗಬಾರದು. ಆದ್ದರಿಂದ ನೀವು ಸಕಾಲದಲ್ಲಿ ಎಲ್ಲವನ್ನೂ ಮಾಡುವುದು ಉತ್ತಮ ಅಥವಾ ಇಲ್ಲದೇ ಇದ್ದರೆ......

**Veena Patil**
Managing Director-Kesari




ಬೀಚ್ ಹನಿಮೂನ್‌ನ 6 ರಾತ್ರಿಗಳು

KESARI
World Class Travel Company

CM ಮಾರಿಷಸ್
7 ದಿನಗಳು • 62990
10 ಅಕ್ಟೋ, 14 ನವೆಂ

CT ಥೈಲ್ಯಾಂಡ್
7 ದಿನಗಳು • 41990
16, 30 ಅಕ್ಟೋ, • 2, 13 ನವೆಂ

CB ಥೈಲ್ಯಾಂಡ್ ಪುಕೆಟ್ ಕ್ರಾಬಿ ಕೋಹ್ ಸಮುಯ್
7 ದಿನಗಳು • 57990
2, 11 ನವೆಂ, • 2, 23 ಡಿಸೆಂ

*Terms & Conditions Apply. Advt.

Above All Tours are Ex-Mumbai departures. Bengaluru 4128 2222 • www.kesari.in • SMS KESARI <space> your message to 56677 • Toll free 1800 22 1100